# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1045. |
| ಸದಸ್ಯರು ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ). |
| ಉತ್ತರಿಸಬೇಕಾದ ದಿನಾಂಕ | : | 12.03.2026. |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಮತ್ತು ಇತರ ಪ್ರಮುಖ ನಗರಗಳಲ್ಲಿ ಗರಿಷ್ಟ ಸಮಯದಲ್ಲಿ ಸರಾಸರಿ ಪ್ರಯಾಣದ ವೇಗ ಎಷ್ಟು; ಕಳೆದ 3 ವರ್ಷಗಳಲ್ಲಿ ಅದು ಹೇಗೆ ಬದಲಾಗಿದೆ; ಮಾಹಿತಿ ನೀಡುವುದು; | ಬಂದಿದೆ.<br><br>ಬೆಂಗಳೂರು ನಗರ ಸಂಚಾರ ವಿಭಾಗದಿಂದ ಪರಿಚಯಿಸಲಾಗಿರುವ ಅಸ್ತ್ರಂ ಎಂಬ ಯೋಜನೆಯ ತಾಂತ್ರಿಕ ಪರಿಣಿತರ ವಿಶ್ಲೇಷಣಾ ಮಾಹಿತಿಯಂತೆ ನಗರದ ಹೈಡೆನ್ಸಿಟಿ ಕಾರಿಡಾರ್‌ಗಳಲ್ಲಿ ಪೀಕ್ ಅವರ್ಸ್ ವೇಳೆಯಲ್ಲಿ ಕಳೆದ ಮೂರು ವರ್ಷಗಳ ಸರಾಸರಿ ವೇಗವನ್ನು ಪರಿಗಣಿಸಿದಾಗ ಪ್ರತಿ ಗಂಟೆಗೆ 2023 ರಲ್ಲಿ 20.4 ಕಿ.ಮೀ, 2024 ರಲ್ಲಿ 19.2 ಕಿ.ಮೀ ಹಾಗೂ 2025 ರಲ್ಲಿ 19.4 ಕಿ.ಮೀ ಇರುತ್ತದೆ.<br><br>ಪ್ರಸ್ತುತ ವಿವಿಧ ಪೌರ ಸಂಸ್ಥೆಗಳಿಂದ ಕೈಗೊಳ್ಳಲಾಗುತ್ತಿರುವ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳ ಪ್ರಗತಿಯ ಸಮಯದಲ್ಲಿ ಅಡೆತಡೆಗಳು ಮತ್ತು ರಸ್ತೆ ತಡೆಗಳನ್ನು ಸೃಷ್ಟಿಸಿರುವುದು ಸರಾಸರಿ ವೇಗದಲ್ಲಿ ಕುಂಠಿತವಾಗಲು ಕಾರಣವಾಗಿರುತ್ತದೆ.<br><br>ಮೈಸೂರು ನಗರದಲ್ಲಿ ಗರಿಷ್ಟ ಸಮಯದಲ್ಲಿ ಸರಾಸರಿ ಪ್ರಯಾಣದ ವೇಗದ ಬಗ್ಗೆ ತಾಂತ್ರಿಕ ಪರಿಣಿತರ ವಿಶ್ಲೇಷಣೆ ಕೈಗೊಳ್ಳದೆ ಇರುವುದರಿಂದ ಮೈಸೂರು ನಗರದಲ್ಲಿ ಗರಿಷ್ಟ ಸಮಯದಲ್ಲಿ ಸರಾಸರಿ ಪ್ರಯಾಣದ ವೇಗದ ಬಗ್ಗೆ ಅಧಿಕೃತ ಮಾಹಿತಿ ಲಭ್ಯವಿರುವುದಿಲ್ಲ.<br><br>ಬೆಳಗಾವಿ ನಗರದ ಸರಾಸರಿ ಪ್ರಯಾಣದ ವೇಗ ಪ್ರಸ್ತುತ ಪ್ರಮುಖ ರಸ್ತೆಗಳಲ್ಲಿ ಗರಿಷ್ಟ ಸಂಚಾರದ ಸಮಯದಲ್ಲಿ (ಪೀಕ್ ಅವರ್ಸ್‌ಗಳಲ್ಲಿ) ಸರಾಸರಿ ವೇಗವು ಗಂಟೆಗೆ 15 ರಿಂದ 20 ಕಿ.ಮೀ ಇರುತ್ತದೆ. ಹಾಗೂ ಹೊರವಲಯದ ರಸ್ತೆಗಳಲ್ಲಿ ಗಂಟೆಗೆ 30-40 ಕಿ.ಮೀ ವರೆಗೆ ಇರಬಹುದೆಂದು ಅಂದಾಜಿಸಲಾಗಿದೆ.<br><br>ಮಂಗಳೂರು ನಗರದಲ್ಲಿ ಜನಸಂಖ್ಯೆಯೊಂದಿಗೆ ಬೆಳೆಯುತ್ತಿರುವ ನಗರವಾಗಿದ್ದು, ವರ್ಷದಿಂದ ವರ್ಷಕ್ಕೆ ನಗರದಲ್ಲಿ ನೊಂದಣಿಯಾಗುತ್ತಿರುವ ವಾಹನಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ರಸ್ತೆಗಳು ಕಿರಿದಾಗಿದ್ದು ಹಾಗೂ ತಿರುವುಗಳು ಹೆಚ್ಚಿದ್ದು, ಪಾರ್ಕಿಂಗ್ ಸ್ಥಳಗಳ ಕೊರತೆ ಉಂಟಾಗುತ್ತಿದೆ. ವಾಹನ ದಟ್ಟಣೆ ಅಧಿಕವಾಗುತ್ತಿರುವುದರಿಂದ ನಗರದಲ್ಲಿ ಸರಾಸರಿ ವಾಹನಗಳ ವೇಗದ ಪ್ರಯಾಣದ ವೇಗದ ಬಗ್ಗೆ ಅಧಿಕೃತ ಮಾಹಿತಿ ಲಭ್ಯವಿರುವುದಿಲ್ಲ.<br><br>ಕಲಬುರಗಿ ನಗರ ಸರಾಸರಿ ಪ್ರಯಾಣದ ವೇಗ ಪ್ರಸ್ತುತ ಕಲಬುರಗಿ ನಗರದ ಪ್ರಮುಖ ರಸ್ತೆಗಳಲ್ಲಿ ಗರಿಷ್ಟ ಸಂಚಾರದ ಸಮಯದಲ್ಲಿ (ಪೀಕ್ ಅವರ್ಸ್‌ಗಳಲ್ಲಿ) ಸರಾಸರಿ ವೇಗವು ಗಂಟೆಗೆ 15 ರಿಂದ 20 ಕಿ.ಮೀ ಇರುತ್ತದೆ ಎಂದು ಅಂದಾಜಿಸಲಾಗಿದೆ. ನಗರದ ಹೊರವಲಯದ ರಸ್ತೆಗಳಲ್ಲಿ ಗಂಟೆಗೆ 30-40 ಕಿ.ಮೀ ರವರೆ ಇರಬಹುದೆಂದು ಅಂದಾಜಿಸಲಾಗಿದೆ. |

<table>
<tr>
<td>(ಆ)</td>
<td>ಪದೇ ಪದೇ ಸಂಚಾರ ದಟ್ಟಣೆ ದೂರುಗಳು ಬಂದರೂ ಪ್ರಮುಖ ಚೆಕ್ ಪಾಯಿಂಟ್ ಗಳಲ್ಲಿ ಸಂಚಾರ ಪೊಲೀಸರ ನಿಯೋಜನೆ ಸಾಕಾಗುತ್ತಿಲ್ಲದಿರುವುದಕ್ಕೆ ಕಾರಣವೇನು;</td>
<td>
<ul>
<li>ಬೆಂಗಳೂರು ಸಂಚಾರ ವಿಭಾಗದಿಂದ ಸಾರ್ವಜನಿಕರ ಸುಗಮ ಸಂಚಾರವನ್ನು ಕಲ್ಪಿಸುವ ದೃಷ್ಟಿಯಿಂದ ಎಲ್ಲಾ ಪ್ರಮುಖ ಜಂಕ್ಷನ್‌ಗಳು ಹಾಗೂ ಚೆಕ್ ಪಾಯಿಂಟ್‌ಗಳಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನೇಮಿಸಲಾಗುತ್ತಿರುತ್ತದೆ.</li>
<li>ಹೆಚ್ಚಿನ ಸಿಬ್ಬಂದಿಗಳ ಅವಶ್ಯಕತೆ ಇರುವ ಸ್ಥಳಗಳಲ್ಲಿ ಹೋಂಗಾರ್ಡ್ ಸಿಬ್ಬಂದಿಗಳನ್ನು ನೇಮಿಸಿ, ಸಾರ್ವಜನಿಕರ ಸುಗಮ ಸಂಚಾರಕ್ಕೆ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.</li>
</ul>
</td>
</tr>
<tr>
<td>(ಇ)</td>
<td>ಸಿಗ್ನಲ್‌ಗಳು, ಯು-ಟರ್ನ್‌ಗಳು ಮತ್ತು ಬ್ಯಾರಿಕೇಡ್ಸ್‌ಗಳ ನಿಯೋಜನೆಗೆ ಯಾವ ವೈಜ್ಞಾನಿಕ ಅಧ್ಯಯನಗಳು ಮಾರ್ಗದರ್ಶನ ನೀಡುತ್ತವೆ;</td>
<td>
ಸಂಚಾರದ ಹರಿವನ್ನು ನಿಯಂತ್ರಿಸಲು, ಅಪಘಾತಗಳನ್ನು ತಡೆಗಟ್ಟಲು ಮತ್ತು ಪಾದಚಾರಿಗಳ ಸುಗಮ ಸಂಚಾರದ ದೃಷ್ಟಿಯಿಂದ ಸಿಗ್ನಲ್ ದೀಪಗಳ ಅಳವಡಿಕೆ, ಬ್ಯಾರಿಕೇಡ್‌ಗಳ ನಿಯೋಜನೆ ಹಾಗೂ ಯು-ಟರ್ನ್, ಲೆಫ್ಟ್ ಟರ್ನ್ ನಂತಹ ಸಂಚಾರ ಮಾರ್ಪಾಡುಗಳನ್ನು ಮಾಡಲಾಗುತ್ತಿರುತ್ತದೆ. ಈ ರೀತಿಯ ಸಂಚಾರ ಮಾರ್ಪಾಡುಗಳ ಉದ್ದೇಶವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.
<ol>
<li>ಅಪಘಾತಗಳನ್ನು ತಡೆಗಟ್ಟುವುದು</li>
<li>ಸಂಚಾರ ಹರಿವಿನ ಸಮತೋಲನ</li>
<li>ಪಾದಚಾರಿಗಳ ಸುರಕ್ಷತೆ</li>
</ol>
ಸಂಚಾರ ವಿಭಾಗದಿಂದ ಕೈಗೊಳ್ಳಲಾಗುವ ಯಾವುದೇ ಸಂಚಾರ ಮಾರ್ಪಾಡುಗಳು ಸಂಚಾರದ ಹರಿವಿನ ಪ್ರಮಾಣ, ರಸ್ತೆ ವಿನ್ಯಾಸ, ಪಾದಚಾರಿಗಳ ಸಂಚಾರ ಹಾಗೂ ಸದರಿ ರಸ್ತೆಯಲ್ಲಿನ ಅಪಘಾತಗಳ ಇತಿಹಾಸದ ಮೇಲೆ ಅವಲಂಬಿತವಾಗಿರುತ್ತದೆ.
</td>
</tr>
<tr>
<td>(ಈ)</td>
<td>ಪ್ರಸ್ತುತ ಎಷ್ಟು ಸಿಸಿಟಿವಿ ಮತ್ತು ಎಎನ್‌ಪಿಆರ್ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ಎಷ್ಟು ಕಾರ್ಯನಿರ್ವಹಿಸುತ್ತಿಲ್ಲ; ಮಾಹಿತಿ ನೀಡುವುದು;</td>
<td>
ಬೆಂಗಳೂರು ನಗರದಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ. ಕ್ಯಾಮೆರಾಗಳು ಹಾಗೂ ಎ.ಎನ್.ಪಿ.ಆರ್. ಕ್ಯಾಮೆರಾಗಳ ವಿವರಗಳು ಈ ಕೆಳಕಂಡಂತಿರುತ್ತದೆ.
<table>
<tr><th>ಕ್ಯಾಮರಾಗಳವಿಧ</th><th>ಅಳವಡಿಸಿರುವುದು</th><th>ಕಾರ್ಯನಿರ್ಹಿಸುತ್ತಿರುವುದು</th><th>ಕಾರ್ಯನಿರ್ವಹಿಸದೇಇರುವುದು</th><th>ಕಾರ್ಯನಿರ್ವಹಿಸದೇಇರುವಕಾರಣಗಳು</th></tr>
<tr><td>ಎ.ಎನ್.ಪಿ.ಆರ್ ಕ್ಯಾಮರಾಗಳು</td><td>1254</td><td>1233</td><td>21</td><td>ವಿವಿಧಬೇರಸಂಸ್ಥೆಗಳಿಂದಕೈಗೊಂಡಿರುವ ಕಾಮಗಾರಿಗಳಪ್ರಯುಕ್ತತಾತ್ಕಾಲಿಕವಾಗಿ ಕ್ಯಾಮರಾಗಳಕಾರ್ಯವನ್ನುಸ್ಥಗಿತಗೊಳಿಸಲಾಗಿರುತ್ತದೆ.</td></tr>
<tr><td>ಸಿ.ಸಿ.ಟಿ.ವಿ. ಕ್ಯಾಮರಾಗಳು</td><td>7500</td><td>7477</td><td>23</td><td>ವಿವಿಧಬೇರಸಂಸ್ಥೆಗಳಿಂದಕೈಗೊಂಡಿರುವ ಕಾಮಗಾರಿಗಳಪ್ರಯುಕ್ತತಾತ್ಕಾಲಿಕವಾಗಿ ಕ್ಯಾಮರಾಗಳಕಾರ್ಯವನ್ನುಸ್ಥಗಿತಗೊಳಿಸಲಾಗಿರುತ್ತದೆ</td></tr>
<tr><td>ಪಿ.ಟಿ.ಜಡ್ ಕ್ಯಾಮರಾಗಳು</td><td>500</td><td>500</td><td>-</td><td>-</td></tr>
</table>
</td>
</tr>
</table>

| | | |
|---|---|---|
| (ಉ) | ತಪ್ಪು ಅಥವಾ ನಕಲು ಸಂಚಾರ ದಂಡಗಳನ್ನು ತಡೆಯಲು ಸರ್ಕಾರದ ಹಂತದಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು; | ತಪ್ಪು ಅಥವಾ ನಕಲು ಸಂಚಾರ ದಂಡಗಳ ಬಗ್ಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದ್ದು, ಸಂಚಾರ ವಿಭಾಗದ ಕೇಂದ್ರ ಕಛೇರಿಯಲ್ಲಿ ಸಾರ್ವಜನಿಕರು ತಾವು ಸ್ವೀಕರಿಸಿರುವ ತಪ್ಪು ಅಥವಾ ನಕಲು ಸಂಚಾರ ದಂಡಗಳ ಬಗ್ಗೆ ಮನವಿಯನ್ನು ಸಲ್ಲಿಸಬಹುದಾಗಿರುತ್ತದೆ.<br>ಸಾರ್ವಜನಿಕರಿಗೆ ಕೆ.ಎಸ್.ಪಿ.ಆಪ್ಸ್ ಮುಖಾಂತರ ತಮ್ಮ ಮನವಿಗಳನ್ನು ಸಲ್ಲಿಸಲು ಆನ್‌ಲೈನ್ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಆನ್‌ಲೈನ್ ಮುಖಾಂತರ ತಪ್ಪು ಅಥವಾ ನಕಲು ಸಂಚಾರ ದಂಡಗಳ ಬಗ್ಗೆ ತಮ್ಮ ಮನವಿಯನ್ನು ಸಲ್ಲಿಸಬಹುದಾಗಿರುತ್ತದೆ. |
| (ಊ) | ಸಂಚಾರ ದಂಡದಿಂದ ಬರುವ ಆದಾಯವನ್ನು ರಸ್ತೆ ಸುರಕ್ಷತೆ ಮತ್ತು ಪಾದಚಾರಿ ಮೂಲಸೌಕರ್ಯಕ್ಕೆ ಮರುಹೂಡಿಕೆ ಮಾಡಲಾಗುತ್ತಿದೆಯೇ ? | ಸಂಗ್ರಹಿಸಲಾದ ದಂಡದ ಮೊತ್ತವನ್ನು ನಿಯಮ ಉಲ್ಲಂಘನೆ ದಂಡ ಲೆಕ್ಕ ಶೀರ್ಷಿಕೆ 0050-00-103-0-04 ಗೆ ಜಮೆ ಮಾಡಲಾಗುತ್ತಿರುತ್ತದೆ.<br>ಸರ್ಕಾರಿ ಆದೇಶ ಸಂಖ್ಯೆ: ಹೆಚ್.ಡಿ 11 ಇಎಫ್‌ಎಸ್ 2019, ಬೆಂಗಳೂರು ದಿನಾಂಕ: 21/08/2019 ರೀತ್ಯಾ ಸಂಚಾರ ನಿಯಮ ಉಲ್ಲಂಘನಾ ಪ್ರಕರಣದಲ್ಲಿ ಸಂಗ್ರಹಿಸಲಾಗುವ ದಂಡದ ಶೇ. 50 ರಷ್ಟು ಅನುದಾನವನ್ನು ರಸ್ತೆ ಸುರಕ್ಷತೆಗೆ ವೆಚ್ಚ ಮಾಡಲು ಅನುಮತಿಸಿರುತ್ತದೆ(ಪ್ರತಿಯನ್ನುಅನುಬಂಧ-1ರಲ್ಲಿಲಗತ್ತಿಸಿದೆ). |

ಹೆಚ್‌ಡಿ 126 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.